

# ಆರ್ಕಿಡ - ವಂದಾಕ

- ಡಾ. ಸತ್ಯನಾರಾಯಣ ಭಟ್

ನಾನು ಭೂಮಿಯಲ್ಲಿರುವ ಅತ್ಯಂತ ಪ್ರಾಚೀನ ಸಸ್ಯ ಪ್ರಭೇದಗಳ ಲ್ಲೊಂದಾಗಿದ್ದೇನೆ. ನನ್ನ ಆವಾಸ ಸ್ಥಾನ ಪಶ್ಚಿಮಘಟ್ಟದ ಮಳೆಕಾಡುಗಳು.ನಾನು ನೆಲಮುಟ್ಟುವುದಿಲ್ಲ ಗಾಳಿಯಲ್ಲಿ ಬೇರುಗಳನ್ನು ಅರಳಿಸಿಕೊಂಡು ಪೋಷಣೆಪಡೆಯಬಲ್ಲೆ. ಜಗತ್ತಿನಾದ್ಯಂತ ನನ್ನ ಸೋದರಿಯರು ಸುಮಾರು 15,000 ದಷ್ಟು. ಗರಿಷ್ಠ ಮಳೆ ಹಾಗು ಪ್ರಕರ ಸೂರ್ಯನ ತಾಪ ನನಗೆ ಅತ್ಯಗತ್ಯ. ಮಳೆನಿಂತ ತರುವಾಯ ನಾನು ಸಾಮಾನ್ಯವಾಗಿ ಮುಡಿತುಂಬ ಹೂದಂಡೆ ಅರಳಿಸಿಕೊಳ್ಳುತ್ತೇನೆ. ಅನಂತರ ಗುಂಡನೆಯ ಪುಟ್ಟಹಳದಿಕಾಯಿಗಳು. ಯಾವುದೋ ಹಕ್ಕಿ ಹುಳವೆಂದು ಭ್ರಮಿಸಿ ನನ್ನನ್ನು ತನ್ನ ತೆಕ್ಕೆಯಲ್ಲಿ ಒಯ್ದು ಬೇರೆ ಮರದ ಪೊಟರಿನೊಳಗೆ ಬಿತ್ತಿದಾಗ ಹೊಸ ಸಸಿಯಾಗಿ ಚಿಗುರಿಕೊಳ್ಳುವೆ.

ಆದರೆ ಬೆಂಗಳೂರಿನಂತಹ ಮಹಾನಗರದಲ್ಲಿ ನಾನು ಹೀಗೆ ಹುಟ್ಟಿಕೊಂಡದ್ದಲ್ಲ ಯಾರೋ ಪುಣ್ಯಾತ್ಮರು ೩೦ ವರ್ಷದ ಹಿಂದೆ ನನ್ನನ್ನು ಬಂಡೀಪುರದ ಪರಿಸರದಿಂದ ಹೊತ್ತುತಂದರು. ಇಲ್ಲಿಯ ಭಾರೀ ಗಾತ್ರದ ಪೀಪಿಹೂವಿನ ಮರಕ್ಕೆ ಅಂಟಿಸಿದರು. ಇಲ್ಲಿಯ ಹವೆಗೆ ನಾನು ಮೊದಮೊದಲು ಒಗ್ಗಿಕೊಳ್ಳುವುದು ತುಂಬಾ ಕಷ್ಟವೆನಿಸಿತು. ಆದರೂ ಕುಟುಕುಜೀವ ಹಿಡಿದು ಸುಧಾರಿಸಿಕೊಂಡೆ. ಮೈ ಅರಳಿಸಿಕೊಂಡೆ. ಈಗ ನಾನು ಮೈತುಂಬ ಹೂದಂಡೆಯ ಸಿಂಗಾರವನ್ನು ವರ್ಷಕ್ಕೊಮ್ಮೆ ಹೊಂದುತ್ತೇನೆ. ಕರಗದ ಹುಣ್ಣಿಮೆಯ ಅನಂತರದ ದಿನಗಳಲ್ಲಿ ನನ್ನ ಹೂದಂಡೆಯ ಸಿಂಗಾರ ಕರಗದ ಹೂವಿನ ರೀತಿಯಲ್ಲಿಯೇ ಇರುತ್ತದೆ.

ನನ್ನ ಸಂಗಾತಿಗಳು ಹೂ ಅರಳಿಸಿಕೊಳ್ಳುವುದು ಪಶ್ಚಿಮಘಟ್ಟಗಳಲ್ಲಿ ಸುಮಾರು ಶ್ರಾವಣ ಮಾಸದ ಆಸುಪಾಸಿನಲ್ಲಿ. ಆದರೆ ನನಗೆ ಈ ಸೌಭಾಗ್ಯ ವೈಶಾಖದಲ್ಲಿಯೇ. ಶ್ರಾವಣದ ಹಬ್ಬ ಹುಣ್ಣಿಮೆಗಳಲ್ಲಿ ಕರಾವಳಿಯ ಹೆಂಗಳೆಯರು ಮುಡಿತುಂಬ ನನ್ನನ್ನು ಮುಡಿದುಕೊಳ್ಳುತ್ತಾರೆ. ಅದು ಸೌಭಾಗ್ಯದ ಸಂಕೇತವೆಂದು ಭಾವಿಸುತ್ತಾರೆ. ಅದು ಅವರ ಭಾಷೆಯಲ್ಲಿ ದ್ರೌಪದಿಮಾಲೆ ಅಥವಾ ಒಪ್ಪೊತ್ತಿಮಾಲೆ.



ದೇವಭಾಷೆಯಲ್ಲಿ ನನ್ನನ್ನು ವಂದಾಕ ಎಂಬರು. ಕೆಲವರು ಬದನಿಕೆ ಎಂದು ನನ್ನನ್ನು ಜರೆದು ನಾನು ಅಪ್ಪಿಕೊಂಡ ಮರವನ್ನು ಹಾಳುಮಾಡುತ್ತೇನೆ ಎಂದು ಜರೆವರು. ಲ್ಯಾಟಿನ್ ಭಾಷೆಯಲ್ಲಿ ನನ್ನ ಹೆಸರು **ರಿಂಕೋಸ್ಟೈಲಿಸ್ ಲ್ಯಾಟಿಫೋಲಿಯಾ.** ನನ್ನ ಕುಲ ಆರ್ಕಿಡೇಸಿ.

ನನ್ನ ಎಲೆಯನ್ನು ಹಿತಮಿತವಾಗಿ ಬಿಸಿಮಾಡಿ ರಸಹಿಂಡಿ ಕಿವಿನೋವಿಗೆ ತೊಟ್ಟಿಕ್ಕಿಸುವರು. ನನ್ನ ಬಲಿತ ಕಾಂಡವನ್ನು ಕೀಲುಗಂಟುನೋವುಳ್ಳವರು ಪುಡಿ,ಕಷಾಯ ರೂಪದಲ್ಲಿ ಬಳಸುವರು.

ನನ್ನನ್ನು ನೀವು ಬೆಂಗಳೂರಿನಲ್ಲಿ ನೋಡಬೇಕಾದರೆ ವೈಶಾಖದ ದಿನಗಳಲ್ಲಿ ರಾಜಮಹಲ್ ವಿಲಾಸದ 10ನೇ ಕ್ರಾಸಿನ ತರಂಗ (ಸಿಂಗಮ್ಮ ಶ್ರೀನಿವಾಸನ್ ಫೌಂಡೇಷನ್) ಆವರಣಕ್ಕೆ ಬನ್ನಿ.

***